**ದಿನಾಂಕಃ30.10.2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಜಿ ಟಿ ಪಿ ವಕೀಲರಿಂದಃ-**

1ನೇ ಪ್ರತಿವಾದಿ ರಾಮಚಂದ್ರರವರ ತಾಯಿಯ ಹೆಸರು ನಿಂಗಮ್ಮ ಎಂದರೆ ಸರಿ. ಪಿ ಉಮೇಶ ಇವರು ಖಾನೇಷುಮಾರಿ 384/297 ಆಸ್ತಿಯನ್ನು ನಿಂಗಮ್ಮರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನಿಂಗಮ್ಮ ತೀರಿಕೊಂಡ ನಂತರ ಖಾನೇಷುಮಾರಿ 384/297 ಆಸ್ತಿಯು 1ನೇ ಪ್ರತಿವಾದಿ ರಾಮಚಂದ್ರರವರ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ಸದರಿ ಖಾನೇಷುಮಾರಿ 384/297 ಆಸ್ತಿಯ ವಿಸ್ತೀರ್ಣ ಪೂರ್ವ ಪಶ್ಚಿಮ 40 ಅಡಿ, ಉತ್ತರ ದಕ್ಷಿಣ 30 ಅಡಿ ಎಂದರೆ ಸಾಕ್ಷಿಯು 1 ಗುಂಟೆ ಎನ್ನುತ್ತಾರೆ. 1ನೇ ಪ್ರತಿವಾದಿಯ ತನ್ನ ತಾಯಿಯ ಹೆಸರಿಗೆ ಆಗಿದ್ದ ಕ್ರಯ ಪತ್ರ ಮತ್ತು ಇ ಸ್ವತ್ತು ತದನಂತರ 1ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆ ಹಾಗೆಯೇ ಆತನ ಹೆಸರಿಗೆ ಇ ಸ್ವತ್ತು ಆಗಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ತಾವು ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಖಾನೇಷುಮಾರಿ 384/297 ಆಸ್ತಿಯ ಬಗ್ಗೆ ತಮ್ಮದೇನು ತಕರಾರು ಇಲ್ಲವಾ ಎಂದರೆ ಸಾಕ್ಷಿಯು ತಕರಾರು ಇದೆ ಎನ್ನುತ್ತಾರೆ. ಖಾನೇಷುಮಾರಿ 384/297 ಆಸ್ತಿಯ ಚೆಕ್ಕು ಬಂದಿ ಹೇಳುವಿರಾ ಎಂದರೆ ಸಾಕ್ಷಿಯು ಪೂರ್ವಕ್ಕೆ ಹನಿಯೂರು ಗ್ರಾಮದ ರಾಮೇಗೌಡರಿಗೆ ಸೇರಿದ ನಿವೇಶನ, ಪಶ್ಚಿಮಕ್ಕೆ 15 ಅಡಿ ರಸ್ತೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಗೌತಮ್ ಎಂಬುವವರು ನಿವೇಶನಗಳ್ನಾಗಿ ಮಾಡಿರುವ ಆಸ್ತಿ ಎನ್ನುತ್ತಾರೆ.

ಪೂರ್ವಕ್ಕೆ ಕರಿಸಿದ್ದಯ್ಯರವರಿಗೆ ಸೇರಿದ ಜಮೀನು, ಪಶ್ಚಿಮಕ್ಕೆ ತಿರುಗಾಡಲು ಇರುವ 16 ಅಡಿ ಇರುವ ರಸ್ತೆ, ಉತ್ತರಕ್ಕೆ ಎಸ್ ಎಂ ಪ್ರಕಾಶ್ ಎಂಬುವವರಿಗೆ ಸೇರಿದ ನಿವೇಶನ, ದಕ್ಷಿಣಕ್ಕೆ ಜಯಮ್ಮನವರ ನಿವೇಶನ ಎಂದರೆ ಸರಿ. 2ನೇ ಪ್ರತಿವಾದಿ ಎಸ್ ಎಂ ಪ್ರಕಾಶ್ ರವರಿಗೆ ಸೇರಿದ ಆಸ್ತಿಯ ನಂಬರ್ ಗೊತ್ತಾ ಎಂದರೆ ಸಾಕ್ಷಿ 93/93 ಎನ್ನುತ್ತಾರೆ. ಸದರಿ 93/93 ಹೊಸ ನಂಬರ್ ಆಗಿ 114/93 ಎಂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಹಳೆ ಆಸ್ತಿ ನಂಬರ್ 93/93ನ್ನು ರಾಜ ಮತ್ತು ಸಿದ್ದಪ್ಪ ಬಿನ್ ಕಡ್ಲೆಬಸವಯ್ಯ ಇವರು ಜಯಶೀಲ ಎಂಬುವವರಿಗೆ ದಿ.16.11.1995 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ ಸಾಕ್ಷಿ ಮುಂದುವರೆದು ನೊಂದಣಿ ಆಗಿಲ್ಲ ನೋಟರಿ ಆಗಿರುತ್ತದೆ ಎನ್ನುತ್ತಾರೆ. ಆಸ್ತಿ ನಂಬರ್ 93/93 ನ್ನು ಜಯಶೀಲರವರಿಂದ 2ನೇ ಪ್ರತಿವಾದಿಯು ದಿ.24.08.2007ರಂದು ಖರೀದಿ

ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿ ನಂಬರ್ 93/93 ಹೊಸ ನಂಬರ್ ಆಗಿ 114/93 ಎಂದು ಇ ಸ್ವತ್ತು ಆಗಿದೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಆಸ್ತಿ ನಂಬರ್ 114/93 2ನೇ ಪ್ರತಿವಾದಿಯ ಹೆಸರಿಗೆ ದಿ. 03.10.2008ರಲ್ಲಿ ತಿದ್ದುಪಡಿ ಆಗಿ ನೊಂದಣಿ ಆಗಿದೆ ಎಂದರೆ ಸರಿ. ರಾಜ ಮತ್ತು ಸಿದ್ದಪ್ಪ 2ನೇ ಪ್ರತಿವಾದಿಯ ವಿರುದ್ದ ಇದೇ ಚನ್ನಪಟ್ಟಣ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 158/2016 ಎಂದು ದಾವೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯು ರಾಜಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಕಡ್ಲೆ ಬಸವಯ್ಯನವರ 3ನೇ ಮಗ ಪುಟ್ಟ ಎಂಬುವವನು ಇದೇ 2ನೇ ಪ್ರತಿವಾದಿಯ ವಿರುದ್ದ ಅಸಲು ದಾವಾ ಸಂಖ್ಯೆ 248/18 ಎಂದು ದಾವೆ ಮಾಡಿ ಸದರಿ ದಾವೆಯು ಪಕ್ಷಗಾರರ ನಡುವೆ ರಾಜಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

**ನನ್ನ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರದ ಪ್ಯಾರ 3ರಲ್ಲಿ 2ನೇ ಪ್ರತಿವಾದಿಯು ಶ್ರೀ ಬಿ ಜಯಶೀಲ ಮತ್ತು ಸಾದುಸುಂದರ ಹಾಗೂ ದಿವ್ಯಶೀಲರವರಿಂದ ಚನ್ನಪಟ್ಟಣ ತಾಲ್ಲೂಕು ಕಸಬಾ ಹೋಬಳಿ ರಾಂಪುರ ಗ್ರಾಮ ಪಂಚಾಯಿತಿಗೆ ಸೇರಿದ ಅಪ್ಪಗೆರೆ ಗ್ರಾಮದ ಖಾನೇಷು ಮಾರಿ ನಂಬರ್ 93/93 ವಿಸ್ತೀರ್ಣ ಪೂರ್ವ ಪಶ್ಚಿಮ 44 ಅಡಿ, ಉತ್ತರ ದಕ್ಷಿಣ 30 ಅಡಿಗಳ ನಿವೇಶನವನ್ನು ಖರೀದಿ ಮಾಡಿದ್ದು ಸದರಿ ಸ್ವತ್ತಿನ ಚೆಕ್ಕು ಬಂದಿಯ ಪಶ್ಚಿಮಕ್ಕೆ 16 ಅಡಿ ರಸ್ತೆ ಇರುತ್ತದೆ ಎಂದು ಬರೆಸಿದ್ದೇನೆ ಎಂದರೆ ಸರಿ.**

ಕಡ್ಲೆ ಬಸವಯ್ಯನ ಮಗ ರಾಜನಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಮಾಡಿರುವ ನಕ್ಷೆಯನ್ನು ಈ ಕೇಸಿಗೊಸ್ಕರ ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-4, 5 ಮತ್ತು ಇ ಸ್ವತ್ತಿನಲ್ಲಿ ನಮೂದು ಮಾಡಿರುವ ಚೆಕ್ಕು ಬಂದಿ ಸರಿ ಇದೆಯಾ ಎಂದರೆ ಸಾಕ್ಷಿ ಸರಿ ಇದೆ ಎನ್ನುತ್ತಾರೆ. ಕ್ರಯಪತ್ರ ಮತ್ತು ಚೆಕ್ಕು ಬಂದಿಯಲ್ಲಿ ತೋರಿಸಿರುವ ದಾಖಲೆಗಳನ್ನು ಕೇಸಿಗೊಸ್ಕರ ಸೃಷ್ಟಿಪಡಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ಪರ ವಕೀಲರು ಸಾಕ್ಷಿಗೆ 5 ಪೋಟೋಗಳನ್ನು ತೋರಿಸಿ ಆ ಪೋಟೋದಲ್ಲಿ ಕಾಣುವ ಆಸ್ತಿಯು ಖಾನೇಷು ಮಾರಿ ನಂಬರ್ 93/93 ಹೊಸ ಖಾನೇಷು ಮಾರಿ ನಂಬರ್ 114/93 ಆಸ್ತಿಯನ್ನು ತೋರಿಸಿ ಅದರಲ್ಲಿ ಸೀಟಿನ ಮನೆ ನಿರ್ಮಿಸಿಕೊಂಡು ಇರುತ್ತಾರೆ ಎಂದು ತೋರಿಸಿ ಕೇಳಲಾಗಿ ಸಾಕ್ಷಿ ನೋಡಿ ಹೌದು ಎಂದು ಒಪ್ಪಿದ ಮೇರೆಗೆ 5 ಪೋಟೋಗಳನ್ನು ಪ್ರತಿವಾದಿಯ ಪರ ನಿಶಾನೆ ಡಿ 1 ರಿಂದ 5 ಎಂದು ಗುರುತಿಸಲಾಯಿತು. ದಾವಾ ಆಸ್ತಿಯನ್ನು ಕ್ರಯಕ್ಕೆ ಖರೀನಿಸಿ ಅದರಲ್ಲಿ ನಾನು ಸ್ವಾದೀನ

ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ಕೇಸಿಗೆ ಅನುಕೂಲ ಆಗಲಿ ಎಂದು ಸೃಷ್ಟಿಪಡಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಖಾನೇಷು ಮಾರಿ ನಂಬರ್ 384/297 ಮತ್ತು 114/93 ಆಸ್ತಿಗಳಿಗೂ ನನಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ದಾವಾ ಅಸ್ತಿಯಲ್ಲಿ ಸ್ವಾದೀನದಲ್ಲೂ ಇಲ್ಲ ಹಾಗಾಗಿ ಪ್ರತಿವಾದಿಯರು ನನಗೆ ತೊಂದರೆ ಕೊಡುವ ಪ್ರಮೇಯವೇ ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ಸೇರಿದ ಆಸ್ತಿಯನ್ನು ಲಪಾಟಾಯಿಸಬೇಕು ಎಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ